<u>ದಿಃ**15-11-2018** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ ಶ್ರೀ ಎ.ಸಿ. ಎನ್ ವಕೀಲರಿಂದಃ</u>

ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

<u>ಪಾಟೀ ಸವಾಲು ಶ್ರೀ ಎಮ್ ಸಿ ಎಚ್ ವಕೀಲರಿಂದಃ</u>

ಈ ಪ್ರಕರಣದ ದಾಖಲು ಆಗುವದಕ್ಕಿಂತ ಮೊದಲು ನಾನು ಹಾಗೂ ನಿಯೋಜಿತ ಪ್ರತಿವಾದಿ 3(ಎ) ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನಿಯೋಜಿತ ಪ್ರತಿವಾದಿ 3(ಎ) ನನ್ನ ಗಂಡನ ಮೊದಲನೆ ಹೆಂಡತಿ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನ್ನ ಗಂಡನಿಗೆ ಎಷ್ಟು ಹಕ್ಕು ಇದೆಯೋ ಅಷ್ಟೇ ಹಕ್ಕು ನನಗೆ ಇರುತ್ತದೆ. ನನ್ನ ಗಂಡ ಮರಣ ಹೊಂದಿದ ನಂತರ ನಿಯೋಜಿತ ಪ್ರತಿವಾದಿ 3(ಎ) ನನ್ನನ್ನು ಹಾಗೂ ನನ್ನ ಮಕ್ಕಳನ್ನು ವಾರಸುದಾರನ್ನಾಗಿ ತರುವದರಿಂದ ನಮಗೆ ನಷ್ಟ ಉಂಟಾಗುತ್ತದೆ. ಏಕೆಂದರೆ ಅರ್ಜಿಯನ್ನು ವಿಳಂಬವಾಗಿ ಸಲ್ಲಿಸಲಾಗಿದೆ. ಎಷ್ಟು ವಿಳಂಬವಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ವಕೀಲರು ವಿಳಂಬವಾಗಿದೆ ಎಂದು ಹೇಳುವಂತೆ ಹೇಳಿದ್ದರಿಂದ ಆ ರೀತಿ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಾಂತೇಶ ಇವರಿಗೆ ಕ್ರಮೇಣವಾಗಿ ಕಿವಿ ಕೇಳಿಸುವುದು ಕಡಿಮೆಯಾಗಿತ್ತು ಅದೇ ರೀತಿ ವಾದಿಯು ಕೂಡ ಕ್ರಮೇಣವಾಗಿ ಕಿವಿ ಕೇಳುವುದು ಕಡಿಮೆಯಾಗಿದೆ ಎಂದರೆ ಹುಟ್ಟಿನಿಂದಲೇ ಕಡಿಮೆಯಾಗಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ನಾನು ವಾದಿಯನ್ನು 4 ವರ್ಷಗಳಿಂದ ನೋಡುತ್ತಿದ್ದೇನೆ. ನನ್ನ ಗಂಡ ಮರಣ ಹೊಂದಿದ ನಂತರ ವಾದಿಗೆ ಆರೋಗ್ಯ ಚೆನ್ನಾಗಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ

ಮರಣ ಹೊಂದಿದಾಗ ವಾದಿ ದೇವಗಿರಿ ಪ್ಲಾಟನಲ್ಲಿ ವಾಸ ಮಾಡುತ್ತಿದ್ದಾ ಎಂದರೆ ಸರಿಯಲ್ಲ. ನಮ್ಮ ಹಾಗೂ ವಾದಿಯ ನಡುವೆ ಸಂಬಂಧ ಅನ್ಯೋನ್ಯವಾಗಿ ಇರಲಿಲ್ಲ. ವಾದಿಯ ಮನೆಯಲ್ಲಿ ನಡೆಯುತ್ತಿರುವ ವಿಷಯಗಳು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಮಹಾಂತೇಶ ಇವರು ಮರಣ ಹೊಂದಿದ ನಂತರ ವಾದಿಗೆ ಆರೋಗ್ಯ ಚೆನ್ನಾಗಿ ಇಲ್ಲದೆ ಇರುವ ಕಾರಣ ಈ ಅರ್ಜಿಗಳನ್ನು ಸಲ್ಲಿಸಲು ವಿಳಂಬವಾಗಿರುತ್ತದೆ ಎಂದರೆ ಸರಿಯಲ್ಲ. ವಾದಿ ಬಗ್ಗೆ ನನಗೆ ವೈಯಕ್ತಿಕವಾಗಿ ಏನು ಗೊತ್ತಿಲ್ಲದಿದ್ದರೂ ಕೂಡ ಅವನಿಗೆ ಆರೋಗ್ಯ ಚೆನ್ನಾಗಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.
ಹಾವೇರಿ.